INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -2, July-Auguest, 2021, Page No,70-76
Peer Reviewed Journal, Referred Journal

# ಹಂಪೆಯ ಸ್ಮಾರಕಗಳ ಸಂರಕ್ಷಣೆಯ ಒಂದು ನೋಟ

**ಶಾಂತಾದೇವಿ.ಪಿ.**[1]

ದೇಶ ವಿದೇಶಗಳಲ್ಲಿ ಪುರಾತನ ಕಾಲದಿಂದಲೂ ಮತ್ತು ನಾಗರಿಕತೆಯ ಆರಂಭದಿಂದಲೂ ಮಾನವನು ತನ್ನ ಇರುವಿಕೆಯನ್ನು ಪ್ರತಿನಿಧಿಸುವ ಮತ್ತು ಆತನ ಕಾಲದ ಚರಿತ್ರೆಯನ್ನು ಪ್ರತಿಪಾದಿಸುವ ಕುರುಹುಗಳನ್ನು ಸ್ಮಾರಕಗಳ ರೂಪದಲ್ಲಿ ಸ್ಥಾಪಿಸಿ ಗತಿಸಿದ್ದಾನೆ. ಅವುಗಳು ಕಾಲಾನಂತರದಲ್ಲಿ ಗತಕಾಲದ ಮಾನವ ನಿರ್ಮಿತ ಚರಿತ್ರೆಯನ್ನು ಮುಂದಿನ ಪೀಳಿಗೆಗೆ ಸಾಕ್ಷೀಸಹಿತ ಒದಗಿಸಿಕೊಡುತ್ತವೆ. ಎಂದೇ ಹೇಳಬಹುದು. ಈ ಹಿನ್ನೆಲೆಯೊಳಗೆ ಹಂಪೆಯಲ್ಲಿ ನಿರ್ಮಾಣಗೊಂಡಿರುವಂಥ ಸ್ಮಾಕರಗಳ ಸಂರಕ್ಷಣೆಯನ್ನು ಕುರಿತು ಪರಿವೀಕ್ಷಣೆಯನ್ನು ಮಾಡಲಾಗಿದೆ. ಸ್ಮಾರಕಗಳೆಂದರೆ ಜ್ಞಾಪಕಾರ್ಥವಾಗಿಟ್ಟಿರುವ, ಕಟ್ಟಿಸಿರುವ ವಸ್ತುಗಳ ಪ್ರತಿಮೆಗಳು, ದೇವಾಲಯಗಳು, ಕಟ್ಟೆ, ಕೋಟೆಗಳಗಳನ್ನು ಹೆಸರಿಸುತ್ತೇವೆ. ಸ್ಮಾರಕಗಳ ಸಂರಕ್ಷಣೆಯ ಸಂಶೋಧನೆಯಷ್ಟೇ ಮುಖ್ಯವಾಗಿದೆ. ಕ್ರಿ.ಶ. ವಿಜಯನಗರ ಆಡಳಿತದ ಕಾಲದ ಶಿಲ್ಪ ಮತ್ತು ವಾಸ್ತು ವೈಭವದ ಪ್ರತೀಕವೇ ಆಗಿರುವ ಹಂಪಿಯ ಕೆಲವು ಸ್ಮಾರಕಗಳು ಮಳೆ, ಗಾಳಿಯಂಥ ಪ್ರಾಕೃತಿಕ ದಾಳಿಗೆ ಸಿಕ್ಕಿ ಹಾಳಾಗುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ 1565ರಲ್ಲಿ ವಿಜಯನಗರವು ಪತನವಾದ ಅನಂತರ ವೈರಿ ಸೈನ್ಯದ ಕೈಯಲ್ಲಿ ಧ್ವಂಸಗೊಂಡಿರುವುದಲ್ಲದೇ ಅಂದಿನಿಂದ ಇಂದಿನವರೆಗೂ ನಿರಂರವಾಗಿ ಸರಿಸುಮಾರು 400 ವರ್ಷಗಳಗೂ ಹೆಚ್ಚು ಕಾಲ ಮಳೆ, ಬಿಸಿಲು, ಸಸ್ಯ-ಗಿಡ-ಮರಗಳಂಥ ನೈಸರ್ಗಿಕ ಕಾರಣಗಳಿಂದ ಮತ್ತು ಉಳುಮೆ ಮಾಡುವುದು ಅಥವಾ ಮನೆ, ಹೊಲ, ಅಂಗಡಿ, ಹೋಟೆಲ್‌ಗಳನ್ನು ಕಟ್ಟುವುದರಿಂದ ಮಾನವನಿಂದ ಈ ಸ್ಮಾರಕಗಳಿಗೆ ಧಕ್ಕೆಯುಂಟಾಗುತ್ತಿದೆ. ಉದಾಹರಣೆಗೆ; 1856ರಲ್ಲಿ ಅಲೆಕ್ಸಾಂಡರ್ ಗ್ರೀನ್‌ಲಾ ತೆಗೆದ 60 ಸ್ಮಾರಕಗಳನ್ನು ಮತ್ತು 1983ರಲ್ಲಿ ಜಾನ್‌ಗಾಲಿಂಗ್ಸ್ ತೆಗೆದಅದೇ ಸ್ಮಾರಕ ಛಾಯಾಚಿತ್ರಗಳನ್ನು ನೋಡಿದಾಗ ಸುಮಾರು 130 ವರ್ಷಗಳ ಅಂತರದಲ್ಲಿ ಈ ಸ್ಮಾರಕಗಳು ಹಾಳಾದ ತೀವ್ರತೆಯನ್ನು ನೋಡಬಹುದು. ವಿನಾಶದ ಅಂಚಿನಲ್ಲಿರುವ ಸ್ಮಾರಕಗಳ ದಾಖಲೀಕರಣ ಮತ್ತು ಅವುಗಳ ಸಂರಕ್ಷಣೆ ಮೊದಲು ಬ್ರಿಟಿಷ ಅಧಿಕಾರಿಗಳಿಂದ ಆರಂಭವಾಯಿತು. ಬ್ರಿಟಿಷ್ ಆಡಳಿತದ

**1. ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**

ಅವಧಿಯಲ್ಲಿ ಬಳ್ಳಾರಿಯು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ 22 ಜಿಲ್ಲೆಗಳಲ್ಲಿ ಒಂದಾಗಿತ್ತು. ಆ ಕಾರಣಕ್ಕಾಗಿ ಹಂಪಿಯ ಸ್ಮಾರಕಗಳ ರಕ್ಷಣೆಕಾರ್ಯವು ಅವರ ಕಾಲದಲ್ಲೇ ಪ್ರಾರಂಭವಾಯಿತು. ಹಂಪೆಯ ಸ್ಮಾರಕಗಳ ಸಂರಕ್ಷಣೆಯ ಕೆಲಸವನ್ನು ಬ್ರಿಟಿಷ್ ಅಧಿಕಾರಿಗಳು ಮೊದಲು ಆರಂಭಿಸಿದರು. ಅವರಲ್ಲಿ ಬಳ್ಳಾರಿ ಕಲೆಕ್ಟರ್ ಆಗಿದ್ದ ರಾಬರ್ಟ್ ಸಿವೆಲ್ ಅವರು ಹಂಪಿಯ 1877ರಲ್ಲಿ ಅವಸಾನದಂಚಿನಲ್ಲಿರುವ ಕೆಲ ಸ್ಮಾರಕಗಳ ಸಂರಕ್ಷಣೆ ಮಾಡಿದರು. ಇದಕ್ಕಿಂತಲೂ ಮುಖ್ಯವಾಗಿ ಇಲ್ಲಿ ಅವರು ವಿಜಯನಗರ ಸಾಮ್ರಾಜ್ಯದ ಕುರಿತು ಅನ್ವೇಷಣೆಯನ್ನು ತಳಸ್ಪರ್ಶಿಯಾಗಿ ಕೈಗೊಂಡು ಅವುಗಳನ್ನು "ಫಾರಗೆಟನ್ ಎಂಪೈರ್"ಎನ್ನುವ ಕೃತಿಯನ್ನು ಹೊರತಂದು ಇಡೀ ಜಗತ್ತಿಗೆ ಹಂಪಿಯನ್ನು ಮೊದಲು ಪರಿಚಯಿಸಿದರು. ಅದೇ ರೀತಿ 1800–1807ರ ವರೆಗೆ ಕಲೆಕ್ಟರ್ ಆಗಿದ್ದ ಎಫ್.ಡಬ್ಲ್ಯೂ.ರಾಬರ್ಟ್ಸನ್ ಅವರು ಹಂಪಿಯ ಸ್ಮಾರಕಗಳನ್ನು ವೀಕ್ಷಿಸಿ ಅವುಗಳಲ್ಲಿ ಕಲ್ಲಿನತೇರು, ವಿರೂಪಾಕ್ಷದೇವಾಲಯದ ಮುಖ್ಯ ಗೋಪುರಗಳಿಗೆ ತಡೆಗೋಡೆ ನಿರ್ಮಿಸಿ ಅವುಗಳು ಬೀಳದಂತೆ ಸಂರಕ್ಷಣೆ ಮಾಡಿದರು. 1885ರಲ್ಲಿ ವಿರೂಪಾಕ್ಷ ದೇವಾಲಯದ ರಥೋತ್ಸವಕ್ಕೆ ಬಳ್ಳಾರಿ ಕಲೆಕ್ಟರ್ ಅವರು ಅನುಮತಿ ನೀಡಿದ್ದು ಬಹಳ ಮುಖ್ಯವಾದ ಅಂಶ. ಹಂಪಿಯ ಅಸಂಖ್ಯಾತ ಸ್ಮಾರಕಗಳ ಸಮೂಹವನ್ನು ಅವುಗಳ ವಿಶೇಷತೆಯನ್ನು ಗಮನಿಸಿದ ಯುನೆಸ್ಕೋ 1986ರಲ್ಲಿ ಹಂಪಿ ಪ್ರದೇಶವನ್ನು ವಿಶ್ವಪರಂಪರೆ ತಾಣವೆಂದು ಘೋಷಿಸಿತು. ಭಾರತೀಯ ಪುರಾತತ್ವ ಸವೇಕ್ಷನೆ ಇಲಾಖ 56 ಸ್ಮಾರಕಗಳನ್ನು ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಸುಮಾರು 1200 ಸ್ಮಾರಕಗಳನ್ನು ಈ ಪ್ರದೇಶದಲ್ಲಿ ಗುರುತಿಸಿದೆ. ಯುನೆಸ್ಕೋ ನಿರ್ದೇಶನದಂತೆ ಕರ್ನಾಟಕ ಸರ್ಕಾರವು ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವನ್ನು 2001 ರಲ್ಲಿ ಸ್ಥಾಪಿಸಿದೆ.

ಇದರ 2002ರ ಕಾಯ್ದೆ ಅನ್ವಯ ಇದರ ವ್ಯಾಪ್ತಿಯಲ್ಲಿ ವಿಜಯನಗರಜಿಲ್ಲೆಯ 14 ಗ್ರಾಮಗಳು ಮತ್ತು ಕೊಪ್ಪಳ ಜಿಲ್ಲೆಯ 15 ಗ್ರಾಮಗಳನ್ನು ಒಳಗೊಂಡಂತೆ ಒಟ್ಟು 29 ಗ್ರಾಮಗಳು ಬರುತ್ತವೆ. ಈ ಪ್ರಾಧಿಕಾರವು ಇಲ್ಲಿರುವ ಸಾಂಸ್ಕೃತಿಕ ಮತ್ತು ನೈಸರ್ಗಿಕ ಸಂಪತ್ತನ್ನು ಗುರುತಿಸಿ ಸಂರಕ್ಷಣೆ ಮಾಡುವುದು ಮತ್ತು ಇಲ್ಲಿರುವ ಸ್ಮಾರಕಗಳನ್ನು ಸಂರಕ್ಷಣೆ ಮಾಡುವುದು ಹಾಗೂ ಅನಿಯಮಿತ ಅಭಿವೃದ್ಧಿಯನ್ನು ತಡೆಯುವುದು ಮತ್ತು ಜನರ ಅಭಿವೃದ್ಧಿ ಮಟ್ಟವನ್ನು ಹೆಚ್ಚಿಸುವ ಪ್ರಧಾನ ಉದ್ದೇಶಗಳನ್ನು ಹೊಂದಿದೆ. ಇದು ತನ್ನ ಕಾರ್ಯವ್ಯಾಪ್ತಿಯ ಹಳ್ಳಿಗಳನ್ನು ಕೋರ್, ಬಸ್ಫರ್ ಮತ್ತು ಫೆರಿವರಿ ಎಂಬ ಮೂರು ಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದು ಜನರ ಅಗತ್ಯತೆಗಳನ್ನು ಅನುಸರಿಸಿ ಕಟ್ಟಡಕಾಮಗಾರಿ ವ್ಯಾಪಾರ ಪರವಾನಿಗೆಯನ್ನು ನೀಡುತ್ತಿದೆ. ರಾಜ್ಯ  ಮತ್ತು ಕೇಂದ್ರ ಸರಕಾರಗಳು ಹಂಪಿ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ಅನುಷ್ಠಾನಗೊಳಿಸಲು ತುದಿಗಾಲಿನಲ್ಲಿ ನಿಂತಿದೆ. ಈಗಾಗಲೇ ಕೇಂದ್ರ ಸರಕಾರ ಸುಮಾರು 85 ಮತ್ತು ರಾಜ್ಯ ಸರಕಾರ ಸುಮಾರು 1200 ಸ್ಮಾರಕಗಳು ರಕ್ಷಣೆ ಹೊಣೆ ಹೊತ್ತಿವೆ. ಹಂಪಿಯನ್ನು ಸದೃಡಗೊಳಸಲು ರಾಜ್ಯ ಸರಕಾರ ಮುಂದಾಗಿದೆ. ಇದಕ್ಕಾಗಿ ಹಂಪಿ ಪ್ರಾಧಿಕಾರ 2008ರ ಮೇನಲ್ಲಿ

ಮಾಸ್ಟರ್ ಪ್ಲಾನ್‌ಗೆ ಹಸಿರು ನಿಶಾನೆ ತೋರಿದೆ. ಹಂಪಿಯ ಸ್ಮಾರಕ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸಹಜ ರೀತಿಯಲ್ಲಿ ಮುಂದಿನ ಪೀಳಿಗೆಗೆ ಕಟ್ಟಿಕೊಡಲು ಪ್ರಾಧಿಕಾರವು ತನ್ನ ಕಾರ್ಯವನ್ನು ಅರಂಭಿಸಿದೆ. ಮಾಸ್ಟರ್ ಪ್ಲಾನ್‌ನಲ್ಲಿ ಮೊದಲು ಮೂರು ವಲಯಗಳನ್ನು ವಿಂಗಡಿಸಲಾಗಿದೆ. ಕೋರ್, ಬಫರ್ ಮತ್ತು ಪೆಡರಲ್‌ಝೋನ್ ಎಂದು ವಿಂಗಡಿಸಲಾಗಿತ್ತು. ಅನಂತರದ ದಿನಗಳಲ್ಲಿ ಈ ಬಫರ್ ಝೋನನ್ನು ಕೈಬಿಡಲಾಗಿದೆ. ವಿಜಯನಗರ ಜಿಲ್ಲೆ ಮತ್ತು ತಾಲೂಕಿನ 14 ಹಳ್ಳಿಗಳು ಹಾಗೂ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ 15 ಹಳ್ಳಿಗಳು ವಲಯ ವ್ಯಾಪ್ತಿಗೊಂಡಿದೆ. ಅತಿ ಹೆಚ್ಚು ಸ್ಮಾರಕಗಳನ್ನು ಹೊಂದಿರುವುದನ್ನು ಕೋರ್‌ಜೋನ್ ಎಂದು ಗುರುತಿಸಿದೆ. ಕಡಿಮೆ ಸ್ಮಾರಕಗಳನ್ನು ಒಳಗೊಂಡಿರುವ ಪೆರಿಫ಼ ಎರಲ್‌ಝೋನ್ ಎಂದು ಹೆಸರಿಸಲಾಗಿದೆ. ಸ್ಮಾರಕಗಳ ಸಂರಕ್ಷಣೆ ಪ್ರವಾಸಿಗರಿಗೆ ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿ ಕಟ್ಟಿಕೊಡುವುದು ಕಾಂಕ್ರಿಟ್ ಕಟ್ಟಡಗಳಿಗೆ ತಿಲಾಂಜಲಿ ನೀಡುವುದು. ಒತ್ತುವರಿ ತೆರುವುಗೊಳಸುವುದು, ಹಂಪಿ ಸುತ್ತಲಿನ ಪ್ರದೇಶಗಳಿಗೆ ಸಾಂಸ್ಕೃತಿಕ ಪರಂಪರೆ ನೈಸರ್ಗಿಕ ಪರಿಸರ ಸಂರಕ್ಷಣೆ ಹಂಪಿ ಪ್ರದೇಶದ ಅಭಿವೃದ್ಧಿ ಹಾಗೂ ಮಾಸ್ಟರ್ ಪ್ಲಾನ್ ವಾಣಿಜ್ಯ ಉದ್ದೇಶಕ್ಕಾಗಿ ಅದರ ಬಳಕೆ ತಡೆಯುವುದು ಮಾಸ್ಟರ್ ಪ್ಲಾನನ ಬಹು ಮುಖ್ಯವಾದ ಉದ್ದೇಶವಾಗಿದೆ. ಇಡೀ ಹಂಪಿಯ ಪರಿಸರದಲ್ಲಿರುವ ಸ್ಮಾರಕಗಳನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣವೇ ಆಗಿರುತ್ತದೆ ಎಂದು ಪರಿಗಣಿಸಿದೆ. ಈ ಸ್ಮಾರಕಗಳ ಸಂರಕ್ಷಣೆಯೂ ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ಗಮನಿಸಲಾಗಿದೆ. ಹಂಪಿಯ ಸ್ಮಾರಕಗಳು ಕರ್ನಾಟಕ ಮತ್ತು ಭಾರತೀಯ ಕಲೆ ಮತ್ತು ಸಂಸ್ಕೃತಿಯ ಸಂಕೇತವೇ ಆಗಿರುತ್ತದೆ. ಅವುಗಳನ್ನು ಸಂರಕ್ಷಣೆ ಮಾಡುವುದು ಇಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೇರ ಹೊಣೆಯೇ ಆಗಿರುತ್ತದೆ. ಮತ್ತೇ ಇಷ್ಟೇ ಜವಾಬ್ದಾರಿಯೂ ಸಾಮಾನ್ಯ ಜನರ ಮೇಲೆಯೂ ಕೂಡ ಇದೆ. ಈ ನೆಲೆಯಲ್ಲಿ ಸಂರಕ್ಷಣೆಗೆ ಒಳಗಾಗಿರುವಂಥ ಕಟ್ಟಗಳು. ಅವುಗಳೆಂದರೆ;

1. ಧಾರ್ಮಿಕ ಕಟ್ಟಡಗಳು
2. ನಾಗರಿಕ ಕಟ್ಟಡಗಳು
3. ಇತರೆ ಸಾಮಾನ್ಯ ಕಟ್ಟಡಗಳು

ಹಂಪಿಯ ಸ್ಮಾರಕಗಳಿಗೆ ರಕ್ಷಣಾ ಕಾರ್ಯಗಳನ್ನು ಬ್ರಿಟಿಷರು ಕೈಗೊಂಡಿರುವುದು ಹೆಚ್ಚಾಗಿ ದೇವಾಲಯಗಳಿಗೆ ಮಾತ್ರ. ಇದು ಸ್ಥಳೀಯರ ಧಾರ್ಮಿಕ ಮನೋಭಾವನೆಗಳನ್ನು ಸಂಕೇತಿಸುತ್ತದೆ. ಉಳಿದ ಕಟ್ಟಡಗಳಿಗೆ ದುರಸ್ತಿ ಕಾರ್ಯ ಮಾಡಿದರೂ ಅಲ್ಪಪ್ರಮಾಣದ್ದೆನ್ನಬಹುದು. ಇಲ್ಲಿ ಹೆಚ್ಚಾಗಿ ವಿನಾಶಗೊಂಡಿರುವುದು ನಾಗರಿಕ ಕಟ್ಟಡಗಳಾದರೂ ಹೆಚ್ಚಿನ ಆಸಕ್ತಿ ದೇವಾಲಯಗಳಿಗೆ ತೋರಿಸಿದ್ದು ವಿಶಿಷ್ಟವೆನಿಸಿದೆ.

1. **ಧಾರ್ಮಿಕ ಕಟ್ಟಡಗಳು**: ಹಂಪಿಯ ಪರಿಸರದಲ್ಲಿ ಭಗ್ನಗೊಂಡ ಚಾರಿತ್ರಿಕ ಸ್ಮಾರಕಗಳಿಗೆ ಜೀವಂತಿಕೆ ತುಂಬಿದವರು ಬ್ರಿಟಿಷರು. ಇವುಗಳ ಪೈಕಿ ಹೆಚ್ಚಿನವರು ಧಾರ್ಮಿಕ ಕಟ್ಟಡಗಳು, ದೇವಾಲಯ, ಗುಡಿ–ಗೋಪುರ, ಗೋಡೆ, ಶಿಲ್ಪ, ವೀರಗಲ್ಲು, ಮಾಸ್ತಿಕಲ್ಲು, ಸಮಾಧಿ, ಛತ್ರ, ಮಠ ಇತ್ಯಾದಿಗಳನ್ನು ಹೆಸರಿಸುತ್ತಾ ಇವುಗಳಿಗೆ ಬ್ರಿಟಿಷರು ರಕ್ಷಣಾ ಕಾರ್ಯಗಳನ್ನು ಕೈಗೊಂಡಿದ್ದು ಹೆಚ್ಚು ಗಮನಾರ್ಹವಾಗಿದೆ.

- **ಪಂಪಾ ವಿರೂಪಾಕ್ಷಿದೇವಾಲಯ**

ಪಂಪಾ ವಿರೂಪಾಕ್ಷ ದೇವಾಲಯವೆಂದೇ ಖ್ಯಾತಿ ಪಡೆದ ಈ ದೇವಾಲಯ ಹಂಪಿಯಲ್ಲಿದ್ದು ಅತ್ಯಂತ ಹಳೆಯದಾದ ದೇವಾಲಯಗಳಲ್ಲಿ ಒಂದೇನಿಸಿದೆ. ಈ ದೇವಾಲಯದ ರಂಗಮಂಟಪ, ರಾಯಗೋಪುರವನ್ನು ಮೊದಲೇ ತಿಳಿಸಿದಂತೆ ಶ್ರೀ ಕೃಷ್ಣದೇವರಾಯ ಕಟ್ಟಿಸಿ, ಹಿರೇಗೋಪುರಕ್ಕೆ ಜೀರ್ಣೋದ್ಧಾರ ಮಾಡಿಸಿದ್ದನು. ಸರ್. ಥಾಮಸ್ ಮನ್ರೋ ತನ್ನದೇ ಅವಧಿಯಲ್ಲಿ ಈ ಭಾಗದಲ್ಲಿ ಸಂದರ್ಶಿಸಿದರೂ ಅವರ ಉದ್ದೇಶ ಆನೆಗೊಂದಿ ಮತ್ತು ಹರಪನಹಳ್ಳಿಯ ಪಾಳೆಯಗಾರರನ್ನು ಕುರಿತದ್ದಾಗಿತ್ತು. ಆನಂತರ ಬಂದ ಕಲೆಕ್ಟರ್‌ಗಳ ಗಮನ ಇತ್ತ ಸೆಳೆದುದು ಅಪೂರ್ವವೆನಿಸಿದೆ. ಇಲ್ಲಿರುವ ಗೋಪುರಗಳಿಗೆ 1837ರಲ್ಲಿ ಬಳ್ಳಾರಿ ಜಿಲ್ಲಾ ಕಲೆಕ್ಟರ್ ಆಗಿದ್ದ ರಾಬರ್ಟ್‌ಸನ್‌ನ ನೇತೃತ್ವದಲ್ಲಿ ರಕ್ಷಣಾತ್ಮಕ ಕಾರ್ಯಗಳನ್ನು ಕೈಗೊಂಡಿದ್ದು ತಿಳಿದು ಬರುತ್ತದೆ. ಜನಪ್ರಿಯ ಅಧಿಕಾರಿಯಾದ ಎಫ್.ಡಬ್ಲ್ಯೂ.ರಾಬರ್ಟ್‌ಸನ್ ಕಾಲದಲ್ಲಿ ಬಳ್ಳಾರಿ ದಂಗೆ ನಡೆದರೂ ಕಾಲುವೆ, ನೀರಿನ ವ್ಯವಸ್ಥೆ, ಸ್ಮಾರಕಗಳ ರಕ್ಷಣೆಗೆ ಪ್ರೋತ್ಸಾಹ ನೀಡಿದರು. ಇದೇ ದೇವಾಲಯದ ಉತ್ತರ ದಿಕ್ಕಿಗಿರುವ ಕನಕಗಿರಿಯ ಗೋಪುರವನ್ನು ನಿರ್ಮಿಸಿದವರು ಯಾರೆಂಬುದು ತಿಳಿದಿಲ್ಲ. ಆದರೆ ಹೈದರಾಬಾದಿನ ನಿಜಾಮ ಇದನ್ನು ಕಟ್ಟಿಸಿದನೆಂದು ಪ್ರತೀತಿ ಇದೆ. ಇದನ್ನೂ ಸಹ ರಾಬರ್ಟ್‌ಸನ್ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ರಕ್ಷಣೆಗೊಳಿಸಿದ್ದಲ್ಲದೆ ಇತರ ದುರಸ್ತಿ ಕಾರ್ಯಗಳನ್ನು ಕೈಗೊಂಡಿದ್ದು ಗಮನಾರ್ಹವಾಗಿದೆ.

1856ರ ಅನಂತರ ಗೋಪುರವು ದೇವಾಲಯದಲ್ಲಿ ಕೆಲವು ವಿಗ್ರಹಗಳನ್ನು ಸ್ಥಾನಪಲ್ಲಟಗೊಳಿಸಲಾಗಿದೆ. ಇದನ್ನು ಅಲೆಗ್ಸಾಂಡರ್ ಗ್ರಿನೆಲಾ ಮತ್ತು ಜಾನ್‌ಗಾಲಿಂಗ್ ಅವರ ಫೋಟೋಗ್ರಾಫಿಯಿಂದ ತಿಳಿಯಬಹುದು. ಹಂಪೆಯ ವಿರೂಪಾಕ್ಷದೇವಾಲಯದ ಬೃಹತ್ ಗೋಪುರದ ಮುಂಭಾಗ ಮತ್ತು ಪಶ್ಚಿಮ ಭಾಗ ಬಿರುಕು ಬಿಟ್ಟಿದ್ದರಿಂದ ನಾಲ್ಕು ಕಬ್ಬಿಣದ ತೊಲೆಗಳನ್ನು ಪೂರ್ವ ಮಹಾದ್ವಾರದ ಕಮಾನಿಗೆ ತೊಡಿಸಲಾಗಿದೆ. ಅದೇ ಗೋಪುರದ ಭಾರವನ್ನು ಎರಡು ಗೋಡೆಗಳಲ್ಲಿ ತೋರ್ಪಡಿಸುತ್ತದೆ. ಅದೇ ಗೋಪುರದ ಪಶ್ಚಿಮ ದ್ವಾರಕ್ಕೆ ನಾಲ್ಕು ಕಬ್ಬಿಣದ ಕಂಬಗಳನ್ನು ನಿಲ್ಲಿಸಿ ಎರಡು ತೊಲೆಗಳನ್ನು ಅಡ್ಡಲಾಗಿ ಎರಡು ಬೋಧಿಗಳನ್ನು ಪೂರ್ವ ಪಶ್ಚಿಮವಾಗಿ ಇಡಲಾಗಿದೆ. ಇದರ

ಕಾಲಮಾನ 1884 ರಿಂದ 1886ರಲ್ಲಿ ಆಗಿದೆ ಎಂದು ಹೇಳಬಹುದು. ಈ ದೇವಾಲಯವು ಸ್ವಾತಂತ್ರ್ಯ ಪೂರ್ವದಲ್ಲಿಯೇ ರಕ್ಷಣಾ ಕಾರ್ಯಗಳನನ್ನು ಕೈಗೊಳ್ಳಲಾಗಿದೆ.

**ವಿಠ್ಠಲ ದೇವಾಲಯ**

ಅತ್ಯಂತ ಆಕರ್ಷಿಣೀಯವಾದ ಶಿಲ್ಪ ಸ್ಮಾರಕಗಳಿರುವ ದೇವಾಲಯವಿದು ಮೂರು ಗೋಪುರಗಳಿದ್ದು ಉತ್ಸವ ಮಂಟಪ, ಕಲ್ಯಾಣ ಮಂಟಪಗಳನ್ನು ಹೊಂದಿದ್ದು, ಮೂಲತಃ ವೈಷ್ಣವ ದೇವಾಲಯವಾಗಿದೆ. ಇದರ ಪೂರ್ವದ್ವಾರ, ದಕ್ಷಿಣ ದ್ವಾರಗಳ ಮೇಲ್ಬಾಗ ಕುಸಿದು ಬೀಳುವ ಸಂಭವವಿದ್ದರಿಂದ ಒಳಭಾಗಕ್ಕೆ ಕಬ್ಬಿಣದ ಸಲಾಕೆಗಳನ್ನು ಮತ್ತುಕಲ್ಲಿನ ತೊಲೆಗಳನ್ನು ಗೋಡೆಗೆ ಸೇರಿಸಿದ್ದಾರೆ. ಹಂಪಿಯ ವಿಠ್ಠಲ ದೇವಾಲಯಕ್ಕೆ ಡ್ಯೂಕ್ಆಫ್ ಬುಕಿಂಗ್ ಹ್ಯಾಂ ಭೇಟಿ ನೀಡಿ ಹೇಳುತ್ತಾನೆ. ವಿಠ್ಠಲ ಸುಂದರವಾದ ದೇವಾಲಯ (ಏಕಾಕೃತಿ ಶಿಲೆಗಳಿವೆ) ಮಧುರೆ ಅಥವಾ ವೆಲ್ಲೂರಿನ ದೇವಾಲಯಗಳಂತಿದೆ. ಈ ವಿಠ್ಠಲ ದೇವಾಲಯದ ಹಿಂಭಾಗದಲ್ಲಿ ಪ್ರತ್ಯೇಕ ಮಂಟಪಕ್ಕೆ ಒತ್ತು ಗೋಡೆಯನ್ನು ಮತ್ತು ಮಂಟಪದ ಅರ್ಧಗೋಡೆ ಭಗ್ನಗೊಂಡಿದ್ದರಿಂದ ಪೂರ್ಣಗೊಳಿಸಲಾಗಿದೆ. ಇದು ಆರಂಭದ ಕಲೆಕ್ಟರುಗಳನ್ನು ಮಾಡಿಸಿದ ಕೆಲಸವಲ್ಲ. ಇದೇದೇವಾಲಯದ ಪೂರ್ವ ಮಹಾದ್ವಾರಕ್ಕೆ 1856ರ ಅನಂತರ ಕಲ್ಲಿನಿಂದ ಮೂರು ಕಂಬಗಳನ್ನು ನಿರ್ಮಿಸಲಾಗಿದೆ. ಆಧಾರ ಕಂಬಗಳನ್ನು ಕಲ್ಯಾಣ ಮಂಟಪದಲ್ಲಿ ಎರಡು ದ್ವಾರಗಳಿವೆ. ಉತ್ತರಕ್ಕೆ ದೊಡ್ಡಗಾತ್ರದ ಒತ್ತುಗೋಡೆ ನಿರ್ಮಾಣ ಮಾಡಿರುವುದು ಇದೇ ವಿಠ್ಠಲ ದೇವಾಲಯದಲ್ಲಿ 17ಕ್ಕೂ ಹೆಚ್ಚು ಕಂಬಗಳನ್ನು ಸಹಾಯಕ್ಕೆ ನಿಲ್ಲಿಸಲಾಗಿದೆ. ಇಲ್ಲಿನ ಕಂಬಗಳನ್ನು ಶಬ್ಧ ಪ್ರತಿಧ್ವನಿಸುವುದು ಸಂಗೀತದಂತೆ ಗೋಚರಿಸುವುದನ್ನು ಕಾಣಬಹುದು.

**2. ನಾಗರಿಕ ಕಟ್ಟಡಗಳು**

- ಅಷ್ಟಕೋನಾಕೃತಿಯ ನೀರಿನತೊಟ್ಟಿ

ಕಮಲಾಪುರದಿಂದ ಹಂಪಿಗೆ ಹೋಗುವ ದಾರಿಯಲ್ಲಿ ಕಂಡುಬರುತ್ತದೆ. ಇದು ಅಷ್ಟಭುಜಾಕೃತಿಯ ನೀರಿನ ಚಿಲುಮೆ ದೊಡ್ಡಗಾತ್ರದ ಮೂರು ಒತ್ತುಗೋಡೆಗಳನ್ನು ತೆರೆದ ಕಮಾನು ದ್ವಾರಗಳಿಗೆ ನಿರ್ಮಿಸಲಾಗಿದೆ. ಈ ಕಟ್ಟಡ ಶಾಶ್ವತವಾಗಿ ಈವರೆಗೂ ಸುತ್ತಲೂ ಮೂರು ಕಡೆ ನಿರ್ಮಿಸಿದ ಒತ್ತು ಗೋಡೆಗಳೇ ಕಾರಣವೆನ್ನಬಹುದು. ಬ್ರಿಟಿಷ್ ಇಂಜಿನೀಯರ್‌ಗಳು ಲೋಕೋಪಯೋಗಿ ಇಲಾಖೆವತಿಯಿಂದ ಸ್ವಾತಂತ್ರ್ಯ ಪೂರ್ವದಲ್ಲಿ ಈ ಕಾರ್ಯವನ್ನು ಯಶಸ್ವಿಗೊಳಿಸಿದ್ದಾರೆ. ಇಂದು ಸ್ಮಾರಕವಾಗಿಇದು ನಿಂತಿದೆ.

- ಮಹಾನವಮಿ ದಿಬ್ಬ

1893ರಲ್ಲಿ ರಾಬರ್ಟ್ ಸಿವೆಲ್ ಅವರು ಮಹಾನವಮಿ ದಿಬ್ಬದಲ್ಲಿ ಮಣ್ಣಿನಿಂದ ಆವೃತ್ತವಾಗಿದ್ದ ಅಥವಾ ಹೂತು ಮರೆಯಾಗಿದ್ದ ಶಿಲ್ಪವನ್ನು ಶೋಧಿಸಿ ಬೆಳಕಿಗೆ ತಂದರಲ್ಲದೆ ರಕ್ಷಣೆಯನ್ನು ಒದಗಿಸಲಾಗಿದೆ. ಈಗ ಅದು ಮಹಾನವಮಿ ದಿಬ್ಬದ ವಾಯುವ್ಯ ಭಾಗಕ್ಕಿದೆ. ಮೂಲ ದಾರಿದೇವನುಜ್ಜೈನ ಶಿಕ್ಷಕ ಕೆತ್ತಿ ಶಾಸನ ಬರೆದನೆಂದು ತಿಳಿದು ಬರುತ್ತದೆ.

ಹಂಪೆಯ ಸ್ಮಾರಕಗಳು ನೀಡಿದ ಪ್ರೇರಣೆಗಳು ರೋಚಕವಾದವು ಕವಿಗಳು ಈ ಸ್ಮಾರಕಗಳನ್ನು ಕಂಡು ವ್ಯಥೆಯಿಂದಲೂ ರೋಷಾವೇಶಗಳಿಂದಲೂ ಹೆಮ್ಮೆಯಿಂದಲೂ ಕವನಗಳನ್ನು ಕಟ್ಟಿ ಹಾಡಿರುವುದುಂಟು. "ಹಂಪೆಯಿದು ಕಲಿಯುಗದ ಹಸಿಯ ಹಿರಿಮಸಣ, ಪಾಳಾದ ಕನ್ನಡರಾಯ" ಎಂದು ಕುವೆಂಪು ನಿಡುಸುಯ್ದರೆ, "ತಾಳವಿಲ್ಲದಲೆ ಬೇತಾಳನಂದದಿ ಕುಣಿವ ತಾಳನರ್ತಕನ ಕಾಲ್ಕೆಳಗೆ ತೊತ್ತುಳಿಗೊಂಡು ಹಾಳಾಗಿ ಹುಡಿಗೂಡಿ ಹೋದಕನ್ನಡ ಸಾಲುಗಳು ಬೀಳುಗಳ ಬದಿಬದಿಗೆ ಬೀಳುವ ಬಾಳುಗಳು ಕಾಳರಕ್ಕಸನ ಕಡೆಕೂಳು– ಬಾಳಕವಾದ ನಾಡ ನಡುಮನೆಯಕಂಡೆ" ಎಂದು ಬೇಂದ್ರೆಯವರು ಕೊರಗುತ್ತಾರೆ. ನಿದ್ದೆ ಬಾರದುಇನ್ನು ಈ ಜನ್ಮಕೆ ಬಿದ್ದ ಹಂಪೆಯ ಕಂಡು ಕಂಗೆಟ್ಟೆನು. ತುಂಗಭದ್ರೆಯ ಕೂಸಿನುಸಿರಡಗಿದೆ. ಮಂಗಳದ ಹೆಸರು ಹದಗೆಟ್ಟಿದೆ ಎಂದು ಹೊಯಿಸಳರೂ "ಕಲ್ಲಿನೊಳು ಜೀವವನು ತುಂಬಿದ ಬಲ್ಲಿದರ ಶಿಲ್ಪಗಳ ಮೂರ್ತಿಗಳಲ್ಲ ನೋಡಿದಡಲ್ಲಿ ಕೈಕಾಲ್ಮುರಿದು ಒರಗಿಹವು ಎನಿತು ನೋಡಲಿ ಶಿವ ಶಿವಾ ಮನ ಬಿರಿವದೃಶ್ಯವಿದು ಎಂದು ಜೋಳದರಾಗಿ ದೊಡ್ಡನಗೌಡರೂ ನೊಂದು ಕೊಂಡಿರುವರು ಎಂದು ಅವರು ವಿವರಿಸಿದ್ದಾರೆ.

ಹಂಪೆಯ ಸ್ಮಾರಕಗಳು ಕೇವಲ ಗತೇತಿಹಾಸ ಮತ್ತು ಸಂಸ್ಕೃತಿಗಳ ಸಂಕೇತಗಳಾಗಿಯಷ್ಟೆ ಉಳಿದು ಬಂದಿವೆ ಎಂಬುದು ಅರ್ಥವಿಲ್ಲದ್ದು, ವರ್ತಮಾನದ ಬದುಕನ್ನು ಇವು ಪ್ರತಿಭಾವಿಸುತ್ತಿರುವುದನ್ನು ಇಂದಿಗೂ ಕಾಣಬಹುದು. ಮುಖ್ಯವಾಗಿ ನಾಡು–ನುಡಿಗಳ ರಕ್ಷಣೆಗೆ ಸಂಬಂಧಿಸಿದ ಚಳುವಳಿ ಜನಪರವಾದ ಹೋರಾಟ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಹುಟ್ಟಿಕೊಳ್ಳಲು ಸಂಘಟನೆಗೊಳ್ಳಲು ಮುಖ್ಯ ಪ್ರೇರಣೆಯಾಗಿ ಇವು ಈಗ ಮಾರ್ಪಟ್ಟಿರುವುದು ಸ್ಪಷ್ಟ. ಜನಜಾಗೃತಿಯ ಗಟ್ಟಿನೆಲೆಯಾಗಿ ಉಳಿದು ಬೆಳೆದು ದೇವನೆಲೆಯಾಗಿದ್ದು ಇಹ–ಪರ ಪ್ರಜ್ಞೆಯನ್ನು ಮೂಡಿಸುವಲ್ಲಿ ಹಾಗೂ ವೃಷ್ಠಿ–ಸಮಷ್ಠಿಗಳ ಸಮನ್ವಯತೆ ಸಾಧಿಸುವಲ್ಲಿ ಒಂದು ವಿಧದಲ್ಲಿ ಪ್ರಯೋಗ ರಂಗವಾಗಿರುವುದು ಉತ್ಪ್ರೇಕ್ಷೆಯೆನಿಸಿದರೂ ಸತ್ಯ.

ಹಂಪೆಯಲ್ಲಿ ಪ್ರತಿಯೊಂದು ಸ್ಮಾರಕವೂ ಕೂಡ ಪುರಾತನ ಮತ್ತು ಈ ನೆಲದ ಸಾಂಸ್ಕೃತಿ, ಸಾಮಾಜಿಕ, ರಾಜಕೀಯ, ಆರ್ಥಿಕ, ಕಲೆ, ಚಿತ್ರಕಲೆಯಂಥ ಸೋಬಗಿನ ಸಮಷ್ಠಿ ಚಿತ್ರಣವನ್ನು ಇವುಗಳು ಪ್ರತಿಬಿಂಬಿಸುತ್ತವೆ ಎಂದು ಹೇಳಬಹುದು. ಆದ್ದರಿಂದಲೇ ಇಂದು ಪುರಾತತ್ವ ನಿರ್ದೇಶನಾಲಯವು ತನ್ನ ಸುದರ್ಫಿಗೆ ತೆಗೆಕೊಂಡು ಅವುಗಳಲ್ಲವನ್ನು ಸಂರಕ್ಷಿಸುವ ಮಹತ್ವದ ಜವಾಬ್ದಾರಿಯನ್ನು

ನಿರ್ವಹಿಸಿತ್ತಿರುವುದು ಕಂಡುಬರುತ್ತದೆ. ಅದನ್ನು ವೀಕ್ಷಿಸಲು ಬರುವವರು ಕೂಡ ಅದರ ಸಂರಕ್ಷಣೆಯ ಬಗೆಗೆ ಕಾಳಜಿ ವಹಿಸಿಬೇಕು. ಅಂದರೆ, ಸ್ಮಾರಕಗಳನ್ನು ಹಾನಿಯಾಗದಂಥ ಎಚ್ಚರ ವಹಿಸಿ ವೀಕ್ಷಿಸಿಕೊಂಡು ಬರುವ ಮಹತ್ವದ ಹೊಣೆಗಾರಿಕೆಯೂ ಕೂಡ ಇದೆ. ಯಾವುದೇ ಇಂದು ವಿಶೇಷ ಸ್ಥಳ ಮತ್ತು ವಸ್ತುವಿನ ಮೇಲೆ ಸ್ಪರ್ಶಿಸಬಾರದು ಎಂದು ನಾಮಫಲಕ ಹಾಕಿದರೆ, ಅದನ್ನೇ ಹೆಚ್ಚಿನ ಜನರು ಸ್ಪರ್ಶಿಸುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಯೊಂದು ಸ್ಥಳದಲ್ಲಿ ನಿರ್ಮಾಣಗೊಂಡಿರುವಂಥ ಸ್ಮಾರಕಗಳು ತುಂಬ ಮೌಲ್ಯಯುತವಾದವು. ಮತ್ತೆ, ಈ ನೆಲೆ ಚರಿತ್ರೆಯನ್ನು ಮುಂದಿನ ಪೀಳಗೆ ಸಾಕ್ಷೀಸಹಿತ ಒದಗಿಸಿಕೊಡುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿಯೂ ಹಂಪಿಯಲ್ಲಿರುವ ಸ್ಮಾರಕಗಳ ಸಂರಕ್ಷಣೆಯು ಕೂಡ ಒಂದು ಮಹತ್ವದ ಕಾರ್ಯವೇ ಆಗಿರುತ್ತದೆ.

**ಪರಾಮರ್ಶನ ಗ್ರಂಥಗಳು**


1. ವಿರೂಪಾಕ್ಷಿ ಪೂಜಾರಹಳ್ಳಿ – ವಸಾಹತುಕಾಲೀನ ಬಳ್ಳಾರಿ ಜಿಲ್ಲೆ – ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,2009.
2. ಬಾಲಸುಬ್ರಹ್ಮಣ್ಯ–ಮರೆಯಲಾಗದ ಮಹಾ ಸಾಮ್ರಾಜ್ಯ – ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2000.
3. ನಾಗರಾಜರಾವ್,ಎಂ.ಎಸ್.– ವಿಜಯನಗರ ಥ್ರೂ ದಿ ಎಜಸ್ ಆಫ್ ಅಲೆಕ್ಸಾಂಡರ್ ಗ್ರೀನ್ ಲಾ ಅಂಡ್ ಜಾನ್ ಗಾಲಿಂಗ್ಸ, ಮೈಸೂರು,1983